ಕರ್ನಾಟಕ ಸರಕಾರ
(ಕಂದಾಯ ಇಲಾಖೆ)
ಜಿಲ್ಲಾಧಿಕಾರಿಗಳ ಕಾರ್ಯಾಲಯ, ವಿಜಯಪುರ
Office of the Deputy Commissioner, Vijayapur District,
Vijayapur 586101 (Karnataka)
ದರ್ಬಾರ ಹಾಲ್, ವಿಜಯಪುರ 586101 ☎ 08352 - 251289, 250479,
Fax: 08352 - 251289, 256666 E-Mail: dcbjpest@gmail.com

ಕ್ರ:ಕವಿ:ಸಿಬ್ಬಂದಿ:3:ವಿವ/52/2014-15 ದಿನಾಂಕ : 09 -03-2016

-: ಜ್ಞಾಪನಾ ಪತ್ರ :-

ವಿಷಯ : ವಿಜಯಪುರ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡುವ ಕುರಿತು ಅಂತಿಮ ಆಯ್ಕೆ ಪಟ್ಟಿ (Final Selection List) ಪ್ರಕಟಿಸುವ ಕುರಿತು

ಉಲ್ಲೇಖ : ಈ ಕಾರ್ಯಾಲಯದ ಪತ್ರ ಸಮಸಂಖ್ಯೆ ದಿನಾಂಕ 13-01-2016

-o-

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಜ್ಞಾಪನ ಪತ್ರದಡಿ ಗ್ರಾಮ ಲೆಕ್ಕಿಗ ನೇಮಕಾತಿ ಕುರಿತು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಈ ಆಯ್ಕೆಪಟ್ಟಿಯಲ್ಲಿ 1) ಪ.ಜಾ (ಕನ್ನಡ ಮಾಧ್ಯಮ) 2) ಪ್ರ ವರ್ಗ-2ಎ (ಗ್ರಾಮೀಣ ಅಭ್ಯರ್ಥಿ) 3) ಪ್ರ ವರ್ಗ-3ಬಿ (ಗ್ರಾಮೀಣ ಅಭ್ಯರ್ಥಿ) ಈ ಅಭ್ಯರ್ಥಿಗಳು ಅರ್ಹ ಪಟ್ಟಿಯಲ್ಲಿ ಲಭ್ಯವಾಗದ ಕಾರಣ ಕಾಯ್ದಿರಿಸಿದ ಪಟ್ಟಿಯಿಂದ ಆಯ್ಕೆ ಮಾಡಲಾಗಿತ್ತು ಈ ತಾತ್ಕಾಲಿಕ ಆಯ್ಕೆಪಟ್ಟಿಗೆ ಆಕ್ಷೇಪಣೆಗಳೆನಾದರು ಇದ್ದಲ್ಲಿ ಲಿಖಿತವಾಗಿ ದಿನಾಂಕ 21-01-2016 ರೊಳಗಾಗಿ ಕಾರ್ಯಾಲಯದ ಆವಕ ವಿಭಾಗದಲ್ಲಿ ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು. ಈ ಅವಧಿಯಲ್ಲಿ 13 ಆಕ್ಷೇಪಣೆಗಳನ್ನು ಕಾರ್ಯಾಲಯಕ್ಕೆ ಸ್ವೀಕತವಾಗಿದ್ದು, ಅವುಗಳಲ್ಲಿ ಮೇಲ್ಕಾಣಿಸಿ 03 ಪ್ರವರ್ಗದಡಿ ಮೀಸಲಾತಿಯಲ್ಲಿ ಅಭ್ಯರ್ಥಿಗಳು ಲಭ್ಯವಾಗದ ಕಾರಣ ಕಾಯ್ದಿರಿಸಿದ ಪಟ್ಟಿಯಿಂದ ಪಡೆದ ಅಭ್ಯರ್ಥಿಗಳಕ್ಕಿಂತ ಹೆಚ್ಚಿಗೆ ಅಂಕ ಪಡೆದ ಅಭ್ಯರ್ಥಿಗಳನ್ನು ಆಯ್ಕೆ ಮಾಡದೇ ಇರುವ ಬಗ್ಗೆ ಆಕ್ಷೇಪಣೆಗಳು ಬಂದಿರುತ್ತವೆ.

ಈ ಕುರಿತು ಕೂಲಕುಂಶವಾಗಿ ಪರಿಶೀಲನೆ ಮಾಡಲಾಗಿ (1) ಪರಿಶಿಷ್ಟ ಜಾತಿ (ಕನ್ನಡ ಮಾಧ್ಯಮ) (2) ಪ್ರ ವರ್ಗ-2ಎ (ಗ್ರಾಮೀಣ ಅಭ್ಯರ್ಥಿ) (3) ಪ್ರ ವರ್ಗ-3ಬಿ (ಗ್ರಾಮೀಣ ಅಭ್ಯರ್ಥಿ) ಈ ಮೀಸಲಾತಿಯಡಿ ಅಭ್ಯರ್ಥಿಗಳು ಅರ್ಹ ಪಟ್ಟಿಯಲ್ಲಿ (eligible list) ನಲ್ಲಿ ಲಭ್ಯವಾಗದೇ ಇದ್ದಲ್ಲಿ ಸದರ ಮೀಸಲಾತಿ ರೋಸ್ಟರನಲ್ಲಿ ನೇಮಕಾತಿ ಕೋರಿಕೊಂಡು

ಯಾವುದೇ ರೋಸ್ಟರನಲ್ಲಿ ಆಯ್ಕೆಯಾಗದ ಅಭ್ಯರ್ಥಿಗಳ ಪೈಕಿ ಅತಿ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ಆದರೆ ಉಲ್ಲೇಖಿತ ಜ್ಞಾಪನಾ ಪತ್ರದಡಿ ಕಾಯ್ದಿರಿಸಿದ ಪಟ್ಟಿಯಿಂದ ಆಯ್ಕೆ ಮಾಡಾಗಿತ್ತು. ಈ ಆಯ್ಕೆಪಟ್ಟಿಯನ್ನು ಹಿಂದಕ್ಕೆ ಪಡೆದು ಮೇಲ್ಕಾಣಿಸಿ ರೋಸ್ಟನಲ್ಲಿ ಮೀಸಲಾತಿ ಕೋರಿದ ಅಭ್ಯರ್ಥಿಗಳು ಯಾವುದೇ ರೋಸ್ಟರ ಆಯ್ಕೆಯಾಗದೆ ಇರುವ ಅಭ್ಯರ್ಥಿಗಳ ಪೈಕಿ ಅತಿ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿದೆ.

**(ರಂದೀಪ್ ಡಿ) ಭಾ.ಆ.ಸೇ**
ಅಧ್ಯಕ್ಷರು,
ಗ್ರಾಮ ಲೆಕ್ಕಿಗರ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿಗಳು ವಿಜಯಪುರ

**ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ವಿಜಯಪುರ ಇವರಿಗೆ**
2/- ಸದರ ಸುದ್ದಿಯು ಸರಕಾರಿ ಸುದ್ದಿಯಾಗಿದ್ದು, ಪ್ರಮುಖ ದಿನಪತ್ರಿಕೆಗಳಲ್ಲಿ ಉಚಿತವಾಗಿ ಪ್ರಕಟಿಸಲು ಕೋರಿದೆ.